ಸಾಗಿಸಲಾಗುತ್ತಿತ್ತು; ಗಲ್ಲಿ ವ್ಯಾಪಾರಿಗಳು ಬಾಳೆ, ದ್ರಾಕ್ಷಿ, ಖರ್ಜೂರ ಹೇರಿಕೊಂಡು ಮಾರುತ್ತಿದ್ದರು; ಮುನಿಸಿಪಾಲಿಟಿಯವರು ಊರಕಸ ಒಯ್ಯುತ್ತಿದ್ದರು. ಒಬ್ಬ ಮಹಿಳೆ, ಬಂಡಿಯ ಮೇಲೆ ಪ್ರಯಣಿಗರನ್ನು ಕೂರಿಸಿ, ಕತ್ತೆಜೀನನ್ನು ಹಿಡಿದು ಪ್ರಾಚೀನ ಈಜಿಪ್ಟಿನ ರಾಣಿಯಂತೆ ಧೀಮಂತ ನಡೆಯುತ್ತಿದ್ದಳು. ನನಗೆ ಕ್ರಿಸ್ತಪೂರ್ವ ಯುಗಕ್ಕೆ ಹೋದಂತಾಯಿತು.

ಪಿರಮಿಡ್ಡುಗಳನ್ನು ತೋರಿಸಲು ಪ್ರವಾಸಿಗರನ್ನು ಗಾರ್ದಭಾರೋಹಣ ಮಾಡಿಸಿ ಕರೆದೊಯ್ಯುವ ಪದ್ಧತಿ ಹಿಂದಿತ್ತಂತೆ. ಯಾರೊ ಅಶ್ವಪಕ್ಷಪಾತಿ ಬಂದು ಈ ವ್ಯವಸ್ಥೆಯನ್ನು ರದ್ದುಪಡಿಸಿದನು. ಅಲ್ಲೀಗ ಕುದುರೆ–ಒಂಟೆಗಳಿಗೆ ಮಾತ್ರ ಪ್ರವೇಶ. ವಾಸ್ತವದಲ್ಲಿ ಪಿರಮಿಡ್ಡಿನ ಕಲ್ಲನ್ನು ಹೊತ್ತಿದ್ದು ಕತ್ತೆಗಳು, ಪಿರಮಿಡ್ಡು ದರ್ಶನಕ್ಕೆ ನಿಯೋಜನೆಯಾಗಿದ್ದು ಅಶ್ವಗಳು. ಲೋಕ ವ್ಯವಹಾರವೇ ಹೀಗೆ. ಮುಂಚೂಣಿಯಲ್ಲಿ ಕಾದುವುದು ಸೈನಿಕರು, ಕೀರ್ತಿಪತಾಕೆ ಹಾರಿಸಲು ದೊರೆಗಳು; ಹಿಮಶಿಖರವನ್ನು ಮೊದಲು ಮುಟ್ಟುವುದು ಲಗೇಜುಧಾರಿ ಕತ್ತೆ, ಪತ್ರಿಕೆ ಛಾಪಿಸುವುದು ಪರ್ವತಾರೋಹಿ ವ್ಯಕ್ತಿಯ ಹೆಸರನ್ನು; ಕರ್ಮಕ್ಕೆ ಅಧಿಕಾರ, ಫಲಕ್ಕಲ್ಲ; ಇಲ್ಲೇ ಖಲೀಲ್ ಗಿಬ್ರಾನನ ಮಾರ್ಮಿಕ ಕತೆ ನೆನಪಾಗುತ್ತಿದೆ. ಅದರಲ್ಲಿ ಸೇತುವೆಯೊಂದರ ಮೇಲೆ ಕೆತ್ತಿದ್ದ ದೊರೆಯ ಹೆಸರನ್ನು ಕಂಡ ಒಬ್ಬನು, ಅದನ್ನಳಿಸಿ, 'ಸೇತುವೆ ಕಟ್ಟಲು ಬೇಕಾದ ಕಲ್ಲನ್ನು ಹೊತ್ತು ತಂದಿದ್ದು ಕತ್ತೆಗಳು' ಎಂದು ಬರೆದು ಹೋಗುತ್ತಾನೆ. ಎಂಥಾ ಸತ್ಯದ ವಾಕ್ಯದು. ಒಂದುವೇಳೆ, ಇಮಾರತುಗಳ ಮೇಲೆ ಕಟ್ಟಿದವರ ಹೆಸರನ್ನು ಕಾಣಿಸುವ ಪದ್ಧತಿ ಇದ್ದಿದ್ದರೆ, ನಮ್ಮ ಅರಮನೆ ಕೋಟೆ ಗುಂಬಜಗಳ ಮೇಲೆ ಅಜ್ಞಾತ ಕೂಲಿಕಾರರ ಮತ್ತು ಕತ್ತೆಗಳ ಹೆಸರು ಕೊರೆಯಲ್ಪಡುತ್ತಿದ್ದವು. ದುಡಿದವರಿಗೆ ಕೃತಜ್ಞತೆ ಸಲ್ಲಿಸದ ನಾಗರಿಕತೆ, ಎಷ್ಟು ಪ್ರಾಚೀನ–ಭವ್ಯ ಆಗಿದ್ದರೇನು ಫಲ?

ಈ ವಿಷಯದಲ್ಲಿ ಆಧುನಿಕ ಈಜಿಪ್ತರಿಗಿಂತ ಪ್ರಾಚೀನ ಈಜಿಪ್ತರು ಹೆಚ್ಚು ಉದಾರಿಗಳು. 'ನಮ್ಮ ನಾಗರಿಕತೆ ನಿರ್ಮಾಣವಾಗಿದ್ದು ಸಿಂಹಮುಖೀ ಸ್ಫಿಂಕ್ಸ್‌ಗಳಿಂದಲ್ಲ; ಗಾರ್ದಭಗಳಿಂದ' ಎಂಬ ಸತ್ಯವನ್ನು ಸಾರುವಂತೆ, ಅವರ ಅವಶೇಷಗಳಲ್ಲಿ ಖರಗಳಿವೆ. ಖರವದನ ವ್ಯಕ್ತಿಗಳಿದ್ದಾರೆ. ನಮ್ಮಲ್ಲೂ ಸಾಮಾಜ್ಯ ಅವಶೇಷಗಳಲ್ಲಿ ಸಾಲಾಗಿ ಕೆತ್ತಿದ ಆನೆ ಕುದುರೆ ಒಂಟೆಗಳನ್ನು ನೋಡಬಹುದು. ದಿಟ, ಅವುಗಳ ಕುಮ್ಮಕ್ಕಿಂದಲೇ ಕದನಗಳನ್ನು ಗೆದ್ದಿದ್ದು; ಮುತ್ತುರತ್ನಗಳನು ಬಳ್ಳದಲ್ಲಿ ಅಳೆದು ಮಾರಲು ಸಾಧ್ಯವಾಗಿದ್ದು. ಆದರೆ, ರಣರಂಗಕ್ಕೆ ಬೇಕಾದ ನೀರುನಿಡಿ, ಹುಲ್ಲುಹುಳ್ಳಿ, ಮದ್ದುಗುಂಡು ಹೊತ್ತವರು ಯಾರು? ಅವರ ದಾಖಲಾತಿ ಎಲ್ಲಿದೆ? ಅದೇನೊ ಅಂತಾರಲ್ಲ, ಹೊಳೆದಾಟಿದ ಮೇಲೆ...

ಹಿಂದೆ ಪಿರಮಿಡ್ಡು ಮೈದಾನದಲ್ಲೇ ಕತ್ತೆಸಂತೆ ನಡೆಯುತ್ತಿತ್ತಂತೆ. ಅದನ್ನೀಗ ದೂರ ವರ್ಗಾಯಿಸಲಾಗಿದೆ–ಗಣ್ಯರು ಮನೆಗೆ ಬಂದಾಗ, ಮನೆಗೆಲಸದವರನ್ನು ಹಿತ್ತಲ ಕಡೆ ಕೂರಿಸುವಂತೆ. ಆದರೇನಂತೆ, ಹಳೇ ಶಹರದಿಂದ ಕತ್ತೆಗಳನ್ನು ಹೊರದೂಡಲು ಸಾಧ್ಯವಾಗಿಲ್ಲ. ಪ್ರಾಣಿ–ನಾಗರಿಕ ಸಂಘರ್ಷದಲ್ಲಿ ಅಂತಿಮ ಗೆಲುವು ಪಡೆದ ಭಾವ, ಕತ್ತೆಗಳ ವದನಗಳ ಮೇಲೆ ರಾರಾಜಿಸುತ್ತಿತ್ತು. ದೊಡ್ಡದೇಶಗಳಿಗೆ ತಮ್ಮಲ್ಲಿರುವ ತೈಲವನ್ನು ಸರಬರಾಯಿ ಮಾಡುವ ಮರುಭೂಮಿ ದೇಶಗಳು, ಕತ್ತೆಯನ್ನು ಸಾರಿಗೆಯಲ್ಲಿ ಉಳಿಸಿಕೊಂಡಿವೆ. ಮೊದಮೊದಲು ಇದನ್ನು ಅರಬರ ದಡ್ಡತನವೆಂದೇ ತಿಳಿದಿದ್ದೆ. ವಿಚಾರ ಮಾಡಿದ ತರುವಾಯ ತಿಳಿಯಿತು–ಕತ್ತೆಗಳು ಖಾಲಿಯಾಗುವ ಇಂಧನವಲ್ಲ ಎಂಬ ಗುಟ್ಟು ಅವರಿಗಷ್ಟೆ ಗೊತ್ತಾಗಿದೆ ಎಂದು.

ಮರುಭೂಮಿಯ ಕೃಷಿ ವ್ಯಾಪಾರ ಸಾರಿಗೆಗಳನ್ನು ಕತ್ತೆ–ಒಂಟೆ ಬಿಟ್ಟು ಕಲ್ಪಿಸಿಕೊಳ್ಳುವಂತೆಯೇ ಇಲ್ಲ. ಅವು ಇಲ್ಲಿನ ಬದುಕಿನಲ್ಲಿ 'ಕರಿಮಣಿ ಸರದಲ್ಲಿ ಕೆಂಬವಳಂ ಕೋದಂತೆ' ಸೇರಿಹೋಗಿವೆ; ಇದಕ್ಕೆ ಹಳೇಕೈರೊದಲ್ಲಿದ್ದ ಬೊಂಬೆಗಳ ಅಂಗಡಿಯೇ ಪುರಾವೆ. ಅದರಲ್ಲಿ ಸಮಸ್ತ ಈಜಿಪ್ಟಿನ ಸಂಸ್ಕೃತಿ ಇತಿಹಾಸ ಪರಂಪರೆ, ಬೊಂಬೆರೂಪದಲ್ಲಿ ಹಾಜರಿತ್ತು–ಹಾಡುವ ಗಾಯಕಿ, ವಾದ್ಯ ನುಡಿಸುವ